(ಖಂಡ 23ರಿಂದ 50ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷಿಣಿಯವರು: "ಪ್ರಸ್ತಾಪ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷಿಣಿಯವರೆ, 1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು: ಪ್ರಸ್ತಾಪ ಏನೆಂದರೆ, "1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಸರ್ವಾನುಮತದ ಮತ್ತು ಅವಿರೋಧದ ಅನುಮೋದನೆಯು ದೊರೆತಿದೆ.

ಶ್ರೀ ವಾಟಾಳ್ ನಾಗರಾಜ್ : ಕನ್ನಡಕ್ಕೆ ಜಯವಾಗಲಿ, ಕನ್ನಡಿಗರಿಗೆ ಜಯವಾಗಲಿ ....

(ಭಾವಿಯಲ್ಲಿ ಧರಣಿ ಕುಳಿತಿದ್ದ ಮಾನ್ಯ ಬಿ.ಜೆ.ಪಿ.ಯ ಸದಸ್ಯರುಗಳು "ರೈತರ ಸಾಲ ಮನ್ನಾ ಮಾಡದ ಸರಕಾರಕ್ಕೆ ಧಿಕ್ಕಾರ" ಎಂದು ಘೋಷಣೆ ಕೂಗುತ್ತಿದ್ದರು)

ಶಾಸನಾತ್ಮಕ ನಿರ್ಣಯ

ಉಪಾಧ್ಯಕ್ಷಿಣಿಯವರು: ಈಗ ಶಾಸನಾತ್ಮಕ ನಿರ್ಣಯಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಶಾಸನಾತ್ಮಕ ನಿರ್ಣಯಗಳನ್ನು ಸಭೆಯ ಗಮನಕ್ಕೆ ತರುತ್ತೇನೆ.

"1948ನೇ ಇಸವಿಯ ವಿದ್ಯುಚ್ಛಕ್ತಿ (ಪೂರೈಕೆ) ಅಧಿನಿಯಮದ (1948ರ ಕೇಂದ್ರದ ಅಧಿನಿಯಮ 54) 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಮೊತ್ತವನ್ನು ರೂ. 10 ಕೋಟಿಗೂ ಹೆಚ್ಚಿನ ಗರಿಷ್ಠ ಮಿತಿಗೆ ನಿಗದಿಪಡಿಸಲು ಸದರಿ ಕಲಮಿನ 3ನೇ ಉಪಕಲಮಿನ ಮೇರೆಗೆ ರಾಜ್ಯ ವಿಧಾನಸಭೆಯ ಅನುಮೋದನೆ ಬೇಕಾಗಿರುತ್ತದೆ.

ಹಾಗೂ ಈ ಕಾರಣದಿಂದ ದಿನಾಂಕ 27ನೇ ಆಗಸ್ಟ್ 1974ರಂದು ಕರ್ನಾಟಕ ವಿಧಾನಸಬೆಯು ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ.150ಕೋಟಿ ಎಂದು ನಿಗದಿಪಡಿಸಿರುವ ಸರ್ಕಾರದ ಪ್ರಸ್ತಾವನೆಗೆ ಅನುಮತಿ ನೀಡಿರುತ್ತದೆ.